# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ. 486/2018

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ರಾಕೇಶ್ | ಚಾಸಾಃ**13** ಪ್ರಾಸಾಃ **8** |
| **ತಂದೆಯ ಹೆಸರು** | : | ಪ್ರಕಾಶ್ ಜೆ ಪಿ | |
| **ವಯಸ್ಸು** | : | **38** ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ನೇರಳಗುಂಡಿ ಗ್ರಾಮ | |

ದಿನಾಂಕಃ **27-02-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

1 ನೇ ಆರೋಪಿ ಗೊತ್ತಿಲ್ಲ. ಚಾಸಾ-8 ಗೊತ್ತು. ಚಾಸಾ-9 ಗೊತ್ತಿಲ್ಲ. ಮೃತ ಶ್ರೀನಿವಾಸ ಗೊತ್ತು. ಮೃತ ಶ್ರೀನಿವಾಸರವರು ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಆದರೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗೇ ಸುಮಾರು 6 ವರ್ಷಗಳ ಹಿಂದೆ ನನ್ನ ವೈಯಕ್ತಿಕ ಕೆಲಸದ ಮೇರೆಗೆ ಹೊನ್ನಾಳಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರ ಕೋರಿಕೆಯ ಮೇರೆಗೆ 3 ದಾಖಲೆಗಳಿಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಸ್ಥಳ ಮಹಜರ್ ಅನ್ನು ಈಗಾಗಲೇ ನಿಪಿ-4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು, ಕಚ್ಚ ನಕಾಶೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು, ನಿಪಿ-6 ಮತ್ತು 7 ಛಾಯಾಚಿತ್ರಗಳಲ್ಲಿ ತಾನು ಇರುವ ಬಗ್ಗೆ ನೋಡಿ ಗುರುತಿಸಿದ್ದು

ಆದರೆ ಯಾವ ವಿಚಾರಕ್ಕೆ ತೆಗೆದಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-</u>

ದಿಃ 11-03-2018 ರಂದು ನನ್ನ ಸ್ವಂತ ಕೆಲಸದ ನಿಮಿತ್ತ ಹನುಮನಹಳ್ಳಿ ಕ್ರಾಸ್ ಬಳಿ ಅಂಗಡಿಯ ಹತ್ತಿರ ನಿಂತುಕೊಂಡಿದ್ದಾಗ 1 ನೇ ಆರೋಪಿಯು ಸಂಜೆ 05-15 ಗಂಟೆ ಸಮಯದಲ್ಲಿ ಕುಂದೂರು ಕಡೆಯಿಂದ ಹೊನ್ನಾಳಿ ಕಡೆಗೆ ಕೆಎ-15/ಎ-1716 ಮಹಿಂದ್ರಾ ಬುಲೆರೋ ಪಿಕಪ್ ವಾಹವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬಸವನಗೌಡ ಚಾಲನೆ ಮಾಡಿಕೊಂಡು ಬರುತ್ತಿದ್ದ ಕೆಎ-02/ಇಪಿ-9607 ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿದ್ದು ನಂತರ ಬಸವನಗೌಡ ಮತ್ತು ಬೈಕ್ ನ ಹಿಂಬದಿ ಸವಾರ ಬೈಕ್ ಸಮೇತ ಕೆಳಗೆ ಬಿದಿದ್ದು ನಾನು, ಚಾಸಾ-14 ಮತ್ತು 15 ರವರು ಹೋಗಿ ನೋಡಲಾಗಿ ಬಸವನಗೌಡರವರಿಗೆ ಮುಖ ಕೈ ಕಾಲು ಮತ್ತು ಇತರ ಕಡೆ ಪೆಟ್ಟು ಬಿದಿದ್ದು ಮತ್ತು ಶ್ರೀನಿವಾಸನಿಗೆ ತಲೆಯ ಹಿಂಭಾಗ ಹಣೆ, ಕೈಕಾಲು ಮತ್ತು ಇತರ ಕಡೆ ಪೆಟ್ಟು ಬಿದಿದ್ದು ನಂತರ ನಾವು ಅವರನ್ನು ಉಪಚರಿಸಿ ಆಂಬುಲೆನ್ಸ್ ನಲ್ಲಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ ಎಂದು ಮತ್ತು ಶ್ರೀನಿವಾಸನು ಮಾರ್ಗದ ಮಧ್ಯದಲ್ಲೇ ಮೃತಪಟ್ಟಿರುತ್ತಾರೆ ಎಂದು ಮತ್ತು ಚಾಸಾ-12 ರವರು ಹೊನ್ನಾಳಿ ಆಸ್ಪತ್ರೆಯಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗ ಸಹ್ಯಾದ್ರಿ ನಾರಾಯಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 12-03-2018 ರಂದು ಸಂಜೆ 04-00 ರಿಂದ 05-00 ಗಂಟೆ ಸಮಯದಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ-8 ಮತ್ತು 9 ರವರ ಸಮಕ್ಷಮ ನಿಪಿ-4 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ, ನಿಪಿ-5 ರಂತೆ ಕಚ್ಚ ನಕಾಶೆಯನ್ನು ತಯಾರಿಸಿ ನಿಪಿ-6 ಮತ್ತು 7 ರಂತೆ ಛಾಯಾಚಿತ್ರಗಳನ್ನು ತೆಗೆದು ಮತ್ತು ನಿಪಿ-19 ರಂತೆ ಮುಚ್ಚಳಿಕೆ ಬರೆದುಕೊಟ್ಟಿರುತ್ತೇನೆ ಎಂದು ಪೊಲೀಸರಿಗೆ ನಿಪಿ-20 ರಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ

ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿತರ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.